ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೪

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಅಧಿವೇಶನ**

**ಶುಕ್ರವಾರ, ದಿನಾಂಕ: ೩೦ನೇ ಜನವರಿ, ೨೦೨೬**

---

**ಸಮೂಹ – V**

೧. ಸಮಾಜ ಕಲ್ಯಾಣ ಸಚಿವರು

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

೩. ಕೃಷಿ ಸಚಿವರು

೪. ಕಾರ್ಮಿಕ ಸಚಿವರು

೫. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

೬. ಯೋಜನೆ ಮತ್ತು ಸಾಂಖ್ಯಿಕ ಸಚಿವರು

೭. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

---

## ಕೋಲಾರ ಜಿಲ್ಲೆಯಲ್ಲಿ ಗ್ರಾಮೀಣ ರಸ್ತೆ ಸಂಪೂರ್ಣ ಹಾಳಾಗಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೪೬ (೪೨೮) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಜಿಲ್ಲೆಯ ಎಲ್ಲಾ ೬ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ಗ್ರಾಮೀಣ ರಸ್ತೆಗಳು ಅತಿವೃಷ್ಟಿಯಿಂದ ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ರಸ್ತೆಗಳನ್ನು ದುರಸ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ನರೇಗಾ ಯೋಜನೆ ಹೊರತುಪಡಿಸಿ ಗ್ರಾಮೀಣ ರಸ್ತೆ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿಗಾಗಿ ೨೦೨೪–೨೫ ಹಾಗೂ ೨೦೨೫–೨೬ನೇ ಸಾಲಿನಲ್ಲಿ ಕೋಲಾರ ಜಿಲ್ಲೆಗೆ ನೀಡಿರುವ ಅನುದಾನ ಎಷ್ಟು ; (ಯೋಜನಾವಾರು ಮಾಹಿತಿ ಒದಗಿಸುವುದು)

(ಇ) ಈವರೆಗೂ ಕೋಲಾರ ಜಿಲ್ಲೆಯಲ್ಲಿನ ಗ್ರಾಮೀಣ ರಸ್ತೆಗಳ ದುರಸ್ತಿಗೆ ಅನುದಾನ ಬಿಡುಗಡೆ ಮಾಡದಿರಲು ಕಾರಣಗಳೇನು ; ಯಾವ ಕಾಲಮಿತಿಯೊಳಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದು ?

## ರಾಜ್ಯ ಸರ್ಕಾರದಿಂದ ಆಚರಿಸಲ್ಪಡುತ್ತಿರುವ ಜಯಂತಿ/ಜನ್ಮದಿನಾಚರಣೆಗಳ ಕುರಿತು

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) –**

೪೬ (೫೫೨) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದಿಂದ ಆಚರಿಸಲ್ಪಡುತ್ತಿರುವ ಜಯಂತಿ/ಜನ್ಮದಿನಾಚರಣೆಗಳು ಯಾವುವು ; ಪ್ರತಿ ವರ್ಷ ಒಟ್ಟು ಎಷ್ಟು ಅನುದಾನ ಖರ್ಚು ಮಾಡಲಾಗುತ್ತಿದೆ ; (ಕಳೆದ ೩ ವರ್ಷದ ಮಾಹಿತಿ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ವಿವಿಧ ಜಯಂತಿ/ಜನ್ಮದಿನಾಚರಣೆ ಸಂಬಂಧ ರಾಜ್ಯ ಮಟ್ಟದಲ್ಲಿ ಕಾರ್ಯಕ್ರಮ ಆಯೋಜನೆಗಾಗಿ ಒಟ್ಟು ಎಷ್ಟು ಅನುದಾನ ಖರ್ಚಾಗಿದೆ ; ಆಯೋಜಿಸಿರುವ ಸರಾಸರಿ ಸಂಖ್ಯೆ ಎಷ್ಟು ;

(ಇ) ರಾಜ್ಯ/ಜಿಲ್ಲಾ ಮಟ್ಟದ ಸೀಮಿತ ಜನ ಭಾಗವಹಿಸುವ ಕಾರ್ಯಕ್ರಮಗಳಿಗೆ ಸಾಕಷ್ಟು ಹಣ–ಶ್ರಮ ಖರ್ಚು ಮಾಡಿಯೂ ಜಯಂತಿಗಳ ಆಚರಣೆಯ ಉದ್ದೇಶ ಈಡೇರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಸಾಕಷ್ಟು ಅನುದಾನ ವ್ಯಯಮಾಡಿ, ಜಯಂತಿಗಳನ್ನು ಸೀಮಿತ ಜನರಿಗಾಗಿ ಆಯೋಜಿಸುವ ಬದಲು ರಾಜ್ಯಾದಾದ್ಯಂತ ಶಾಲಾ–ಕಾಲೇಜುಗಳಲ್ಲಿ ಆಯೋಜಿಸಿ ವಿದ್ಯಾರ್ಥಿಗಳಿಗೆ ಜಯಂತಿಗಳ ಮಹತ್ವ ತಿಳಿಸುವುದರ ಜೊತೆಗೆ, ವಿದ್ಯಾರ್ಥಿಗಳು ಭಾಗವಹಿಸುವ ರೀತಿಯಲ್ಲಿ ವಿಭಿನ್ನವಾಗಿ ಆಚರಿಸುವ ಕುರಿತು ಸರ್ಕಾರದ ನಿಲುವೇನು ;

(ಉ) ಈ ರೀತಿ ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯಿಂದ ವ್ಯಕ್ತಿತ್ವ ವಿಕಸನದೊಂದಿಗೆ ಜಯಂತಿಗಳ ಮಹತ್ವವು ಸರ್ವವ್ಯಾಪ್ತಿಯಾಗಿ ಪ್ರಕಟಿಸುವುದು ಸರ್ಕಾರದ ಗಮನಕ್ಕಿದೆಯೇ ; ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ಪ್ರವರ್ಗ–೧ ರ ಜಾತಿಗಳಿಗೆ ವಿದ್ಯಾರ್ಥಿ ನಿಲಯಗಳ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) –**

೪೮ (೩೦೪) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹಿಂದುಳಿದ ಅಲೆಮಾರಿ, ಅರೆ ಅಲೆಮಾರಿ ಜನಾಂಗದ ಶೈಕ್ಷಣಿಕ ಅಭಿವೃದ್ಧಿಗಾಗಿ ಇರುವ ವಿದ್ಯಾರ್ಥಿ ನಿಲಯಗಳು ಹಾಗೂ ವಸತಿ ಶಾಲೆಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ವಿದ್ಯಾರ್ಥಿ ನಿಲಯ ಮತ್ತು ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ಬಾಲಕ/ಬಾಲಕಿಯರ ಪ್ರತ್ಯೇಕ ಮಾಹಿತಿ ನೀಡುವುದು)

(ಇ) ವಿದ್ಯಾಭ್ಯಾಸ ವಂಚಿತರಾಗದಂತೆ ಎಲ್ಲಾ ಹಿಂದುಳಿದ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಪ್ರವೇಶ ನೀಡಲಾಗಿದೆಯೇ ;

(ಈ) ನೀಡದೇ ಇದ್ದಲ್ಲಿ, ಎಷ್ಟು ವಿದ್ಯಾರ್ಥಿಗಳಿಗೆ ನೀಡಿರುವುದಿಲ್ಲ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಲೆಮಾರಿ ಜನಾಂಗಕ್ಕೆ ನೀಡಿದಂತೆ ಹಿಂದುಳಿದ ಅಲೆಮಾರಿ ಜನಾಂಗದವರಿಗೂ ಶಿಕ್ಷಣ ಸೌಲಭ್ಯ ನೀಡುವಲ್ಲಿ ಸರ್ಕಾರದ ನೀತಿ ನಿರೂಪಣೆಗಳೇನು ? (ವಿವರ ಸಲ್ಲಿಸುವುದು)

## MGNREGA ಯೋಜನೆಯ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೯ (೩೧೭) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) MGNREGA ಯೋಜನೆ ಪ್ರಾರಂಭವಾದ ನಂತರ ಇಲ್ಲಿಯವರೆಗೆ ಗ್ರಾಮ ಪಂಚಾಯತಿಗಳಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನಾ ವರದಿಯಲ್ಲಿ ದಾಖಲಾದ ಆಕ್ಷೇಪಣೆ ಮತ್ತು ವಸೂಲಾತಿ ಪ್ರಕರಣಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಪರಿಶೋಧನಾ ವರದಿಯಂತೆ ಆಕ್ಷೇಪಣೆ ಮತ್ತು ವಸೂಲಾತಿ ಪ್ರಕರಣಗಳ ಒಟ್ಟು ಮೊತ್ತವೆಷ್ಟು ; ಸದರಿ ವರದಿಯಲ್ಲಿ ದಾಖಲಿಸಿದ ವಸೂಲಾತಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಸದರಿ ಯೋಜನೆ ಪ್ರಾರಂಭವಾದ ನಂತರ ಜಿಲ್ಲಾ ಒಂಬುಡ್ಸ್ ಮನ್‌ರವರು ಕಾಮಗಾರಿಗಳಲ್ಲಿ ಪತ್ತೆ ಮಾಡಿದ ಭ್ರಷ್ಟಾಚಾರ ಪ್ರಕರಣಗಳ ಸಂಖ್ಯೆ ಎಷ್ಟು ;

ಅವುಗಳ ಮೊತ್ತವೆಷ್ಟು ; ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಿದ ಜನಪ್ರತಿನಿಧಿ ಮತ್ತು ಅಧಿಕಾರಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಯೋಜನೆ ಪ್ರಾರಂಭದ ನಂತರ ಸದರಿ ಕಾಯ್ದೆಗೆ ವಿರುದ್ಧವಾಗಿ ಕೈಗೊಂಡ ಕಾಮಗಾರಿಗಳಿಗೆ ವಿಧಿಸಲಾದ ದಂಡವೆಷ್ಟು ; ವಸೂಲಾತಿ ಮಾಡಿದ ಮೊತ್ತವೆಷ್ಟು ;

(ಉ) ಯೋಜನೆ ಪ್ರಾರಂಭದ ನಂತರ ಸದರಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಮತ್ತು ಎಸಿಬಿ ಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ; ಸದರಿ ಕಾಮಗಾರಿಗಳ ಮೊತ್ತವೆಷ್ಟು ; ಮತ್ತು ಲೋಕಾಯುಕ್ತದ ಆದೇಶದಂತೆ ವಸೂಲಾತಿ ಮಾಡಲಾದ ಕಾಮಗಾರಿಗಳ ಮೊತ್ತವೆಷ್ಟು ;

(ಊ) ಯೋಜನೆ ಪ್ರಾರಂಭದ ನಂತರ ಸದರಿ ಯೋಜನೆಯಲ್ಲಿನ ಲೋಪಗಳ ಕಾರಣಕ್ಕಾಗಿ ಇಲಾಖಾ ವಿಚಾರಣೆ ಎದುರಿಸಿದ ವಿವಿಧ ಹಂತದ ಮತ್ತು ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಮತ್ತು ಅಮಾನತ್ತು ಮಾಡಿದ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಮತ್ತು ಅವರಿಂದ ವಸೂಲಿ ಮಾಡಿದ ಮೊತ್ತ ಎಷ್ಟು ; ಸದರಿ ಯೋಜನೆಯ ದುರುಪಯೋಗದ ಕಾರಣಕ್ಕಾಗಿ ಎಷ್ಟು ಜನಪ್ರತಿನಿಧಿಗಳ ಮೇಲೆ ಪ್ರಕರಣ ದಾಖಲಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಋ) ಸರ್ಕಾರ ೨೦೧೦ರ ನಂತರ ರಾಜ್ಯದಲ್ಲಿ ನಡೆದಿರುವ ಎಲ್ಲಾ ಕಾಮಗಾರಿಗಳನ್ನು ತನಿಖೆಗಾಗಿ ಲೋಕಾಯುಕ್ತ ಸಂಸ್ಥೆಗೆ ವಹಿಸಲು ಕಾರಣವೇನು ?

## ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯ ಹಣವನ್ನು ಗ್ಯಾರಂಟಿಗಳಿಗೆ ಬಳಕೆ ಮಾಡಿರುವ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

೫೦ (೫೨೨) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩–೨೪, ೨೦೨೪–೨೫ ಮತ್ತು ೨೦೨೫–೨೬ನೇ ಸಾಲಿನ ಡಿಸೆಂಬರ್ ಅಂತ್ಯದವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳ ಕಲ್ಯಾಣಕ್ಕಾಗಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಡಿ ಮೀಸಲಿಟ್ಟ ಅನುದಾನವೆಷ್ಟು ; ಬಿಡುಗಡೆಯಾದ ಅನುದಾನವೆಷ್ಟು ;

(ಆ) ಈ ಅನುದಾನದಲ್ಲಿ ಎಷ್ಟು ಮೊತ್ತವನ್ನು ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಮೀಸಲಿರಿಸಿ, ಹಣವನ್ನು ವರ್ಗಾಯಿಸಿದೆ ; ವರ್ಗಾಯಿಸಿದ ಅನುದಾನದಲ್ಲಿ ಎಷ್ಟು ಮೊತ್ತವನ್ನು ಬಳಕೆ ಮಾಡಲಾಗಿದೆ ; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಮೇಲ್ಕಂಡ ಸಾಲಿನಲ್ಲಿ ಎಷ್ಟು ಮೊತ್ತವನ್ನು ಗ್ಯಾರಂಟಿ ಯೋಜನೆಗಳಲ್ಲಿ ಫಲಾನುಭವಿಗಳಾಗಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ವೆಚ್ಚ ಮಾಡಲಾಗಿದೆ ; ಪ್ರತಿಯೊಂದು ಗ್ಯಾರಂಟಿ ಯೋಜನೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಸಂಖ್ಯೆ ಎಷ್ಟು ; (ಪ್ರತಿಯೊಂದು ಗ್ಯಾರಂಟಿ ಯೋಜನೆಯ ಅನುಸಾರ ಮಾಹಿತಿ ನೀಡುವುದು)

(ಈ) ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗೆ ವರ್ಗಾಯಿಸಿದ್ದಲ್ಲಿ, ಅದನ್ನು ಬಳಕೆ ಮಾಡಿಕೊಂಡಿದ್ದಲ್ಲಿ ಆ ಪಂಗಡದ ಫಲಾನುಭವಿಗಳ ಫಲಾನುಭವಿ ಆಗಿಲ್ಲದಿದ್ದರೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಂಡಂತೆ ಆಗುವುದಿಲ್ಲವೇ ; ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆಯ ಉಲ್ಲಂಘನೆಯಾಗುವುದಿಲ್ಲವೇ ; ದಲಿತರ ಕಲ್ಯಾಣಕ್ಕೆ ಹಿನ್ನೆಡೆಯಾಗುವುದಿಲ್ಲವೇ ; (ಮಾಹಿತಿ ನೀಡುವುದು)

(ಉ) ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಬಳಕೆ ಮಾಡಿರುವ ಹಣವನ್ನು ಮತ್ತೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಲ್ಲಿ ವಿನಿಯೋಗ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ;

(ಊ) ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ನಿಗಮಗಳೆಷ್ಟು ; ನಿಗಮಗಳಲ್ಲಿ ಜಾರಿಯಲ್ಲಿರುವ ಯೋಜನೆಗಳು ಯಾವುವು ; ೨೦೨೧–೨೨,

೨೦೨೨–೨೩, ೨೦೨೩–೨೪, ೨೦೨೪–೨೫ ಮತ್ತು ೨೦೨೫–೨೬ನೇ ಸಾಲಿನಲ್ಲಿ ನಿಗಮಗಳಿಗೆ ಘೋಷಣೆಯಾದ ಮತ್ತು ಬಿಡುಗಡೆಯಾದ ಅನುದಾನವೆಷ್ಟು ; ನಿಗಮದಲ್ಲಿ ಸಾರ್ವಜನಿಕರಿಗೆ ಲಭ್ಯವಿರುವ ಯೋಜನೆಗಳ ಅನುಸಾರ ಬಿಡುಗಡೆಯಾದ ಮೊತ್ತ ಮತ್ತು ಫಲಾನುಭವಿಗಳ ಸಂಖ್ಯೆ ಎಷ್ಟು ; ವಿವಿಧ ಯೋಜನೆಗಳಲ್ಲಿ ಆಯ್ಕೆಯಾದ ಎಲ್ಲಾ ಫಲಾನುಭವಿಗಳಿಗೆ ಯೋಜನೆಯನ್ನು ತಲುಪಿಸಲಾಗಿದೆಯೇ ? (ಆರ್ಥಿಕ ವರ್ಷವಾರು ಪ್ರತ್ಯೇಕವಾಗಿ ಸಂಪೂರ್ಣ ಮಾಹಿತಿ ನೀಡುವುದು)

## ಅನ್ನದಾತರ ಆತ್ಮಹತ್ಯೆಯ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೫೧ (೪೭೧) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ರೈತರ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳಾವುವು ; (ಪ್ರತ್ಯೇಕವಾಗಿ ಮಾಹಿತಿ ನೀಡುವುದು)

(ಆ) ೨೦೨೨–೨೩ನೇ ಸಾಲಿನಲ್ಲಿ ಸರ್ಕಾರದಲ್ಲಿ ರೂಪಿಸಲಾದ ರೈತ ಕಲ್ಯಾಣ ಯೋಜನೆಗಳನ್ನು ಯಥಾವತ್ತಾಗಿ ಮುಂದುವರೆಸಲಾಗಿದೆಯೇ ; ಅಥವಾ ಯಾವುದಾದರೂ ಯೋಜನೆಗಳನ್ನು ಕೈಬಿಡಲಾಗಿದೆಯೇ ; ಯೋಜನೆಗಳನ್ನು ನಿಲ್ಲಿಸಿದರೆ ವಿವರಣೆಯೊಂದಿಗೆ ದಾಖಲೆಗಳ ಸಮೇತ ಸಂಪೂರ್ಣ ಮಾಹಿತಿ ನೀಡುವುದು ;

(ಇ) ೨೦೨೩ ಮೇ ತಿಂಗಳಿನಿಂದ ಡಿಸೆಂಬರ್ ೨೦೨೫ರ ವರೆಗೆ ರೈತರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ವರದಿಯಾಗಿದೆಯೇ ; ಒಟ್ಟು ಎಷ್ಟು ಅನ್ನದಾತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ; ಆತ್ಮಹತ್ಯೆಗೆ ಕಾರಣಗಳೇನು ; ಪ್ರಾಣ ಕಳೆದುಕೊಂಡ ಅನ್ನದಾತರಿಗೆ ಪರಿಹಾರ ಪಾವತಿಸಲಾಗಿದೆಯೇ ; (ವರ್ಷವಾರು ಮತ್ತು ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ಪ್ರಸ್ತುತ ಹಣಕಾಸು ವರ್ಷದಲ್ಲಿ ರೈತರ ಕಲ್ಯಾಣಕ್ಕಾಗಿ ಮೀಸಲಿಟ್ಟ, ಮಂಜೂರು ಮಾಡಿದ ಹಾಗೂ ಬಳಕೆಯಾದ ಅನುದಾನದ ಸಂಪೂರ್ಣ

ಮಾಹಿತಿ ನೀಡುವುದು ; ಮಂಜೂರಾದ ಅನುದಾನವನ್ನು ಬಳಕೆ ಮಾಡದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಉ) ಬರಗಾಲದ ಸಮಯದಲ್ಲಿ ರೈತರ ಬೆಳೆಗಳು ಹಾನಿಯಾಗಿದ್ದು, ಅವರನ್ನು ಆರ್ಥಿಕವಾಗಿ ಸದೃಢಗೊಳಿಸಲು ಹಾಗೂ ಬರದಿಂದಾದ ನಷ್ಟವನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿರುವ ವಿದ್ಯಾರ್ಥಿ ವಸತಿ ನಿಲಯಗಳ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೨ (೪೩೬) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ವಿದ್ಯಾರ್ಥಿ ನಿಲಯಗಳಿವೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ಪ್ರತಿ ವರ್ಷ ಎಷ್ಟು ಅರ್ಜಿಗಳು ವಿದ್ಯಾರ್ಥಿ ನಿಲಯಕ್ಕೆ ಬರುತ್ತವೆ ;

(ಇ) ಕಳೆದ ಎರಡು ವರ್ಷಗಳಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಲಾಗಿದೆ ;

(ಈ) ಸದರಿ ವಿದ್ಯಾರ್ಥಿ ನಿಲಯಗಳಿಗೆ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆ ಯಾವ ರೀತಿಯಾಗಿ ಮಾಡಲಾಗುತ್ತದೆ ;

(ಉ) ಪ್ರತಿಯೊಬ್ಬ ವಿದ್ಯಾರ್ಥಿಗೆ ಸರ್ಕಾರ ಒಂದು ವರ್ಷಕ್ಕೆ ಎಷ್ಟು ಹಣ ಖರ್ಚು ಮಾಡುತ್ತಿದೆ ?

## ರಾಜ್ಯದಲ್ಲಿ ಪ್ರಗತಿ ಕಾಣದ ಗಂಗಾ ಕಲ್ಯಾಣ ಯೋಜನೆ

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೫೩ (೫೫೧) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಫಲಾನುಭವಿಗಳ ಸಂಖ್ಯೆ ಗಣನೀಯವಾಗಿ ಕುಸಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಅದಕ್ಕೆ ಕಾರಣವೇನು ; ಕಲಬುರಗಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅರ್ಜಿ ಸಲ್ಲಿಸಿದ ಫಲಾನುಭವಿಗಳ ಸಂಖ್ಯೆ ಹಾಗೂ ಅದರಲ್ಲಿ ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಎಷ್ಟು ;

(ಇ) ಗಂಗಾ ಕಲ್ಯಾಣ ಯೋಜನೆಯ ಪ್ರಗತಿ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## 'ಉದಯರವಿ' ನಿವಾಸವನ್ನು ವಸ್ತುಸಂಗ್ರಹಾಲಯವನ್ನಾಗಿ ರೂಪಿಸುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) –**

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೫೪ (೪೪೬+೫೨೬) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರಿನಲ್ಲಿರುವ ರಾಷ್ಟ್ರಕವಿ ಕುವೆಂಪು ಅವರ 'ಉದಯರವಿ' ನಿವಾಸವು 'ಶ್ರೀರಾಮಾಯಣದರ್ಶನಂ' ಕೃತಿಯ ಜನ್ಮಕ್ಕೆ ಮತ್ತು 'ವಿಶ್ವಮಾನವ' ಸಂದೇಶದ ಉಗಮಕ್ಕೆ ಸಾಕ್ಷಿಯಾದ ಸಂಕೇತವಾಗಿದ್ದು, ಇಂಥ ಪುಣ್ಯಸ್ಥಳವನ್ನು ವಸ್ತುಸಂಗ್ರಹಾಲಯವನ್ನಾಗಿ ಮಾಡಬೇಕೆನ್ನುವುದು ಪ್ರತಿಯೊಬ್ಬ ಕನ್ನಡಿಗರ ಬಹುಕಾಲದ ಕನಸು ಮತ್ತು ಬೇಡಿಕೆಯಾಗಿದ್ದು, ಈ ಕುರಿತ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಇದ್ದಲ್ಲಿ, ಇಂಥಾ ಪುಣ್ಯಸ್ಥಳವನ್ನು ವಿಶ್ವದರ್ಜೆಯ ಹಾಗೂ ಶ್ರೇಷ್ಟ ಮಾದರಿಯ ವಸ್ತುಸಂಗ್ರಹಾಲಯವನ್ನಾಗಿ ಮಾಡಲು ಸರ್ಕಾರ ಇದುವರೆಗೆ ಯಾವುದೇ ಅಗತ್ಯ ಕ್ರಮ ವಹಿಸದೇ ಇರಲು ಕಾರಣಗಳೇನು ;

(ಇ) ನಾಡಿನ ಸಂಸ್ಕೃತಿಯನ್ನು ವ್ಯಾಖ್ಯಾನಿಸಿದ ಮಹನೀಯರ ಪರಂಪರೆಯನ್ನು ರಕ್ಷಿಸುವುದು ಯಾವುದೇ ಸರ್ಕಾರದ ಮೂಲಭೂತ ಕರ್ತವ್ಯವಾಗಿದ್ದು, ಸರ್ಕಾರ ಮತ್ತಷ್ಟು ವಿಳಂಬಕ್ಕೆ ಆಸ್ಪದ ನೀಡದೆ ಯೋಜನೆಗೆ ಅಗತ್ಯವಿರುವ ಧನಸಹಾಯ, ಪರಿಣತರ ನಿರ್ವಹಣೆ ಮತ್ತು ಆಡಳಿತಾತ್ಮಕ ಚೌಕಟ್ಟನ್ನು ಒದಗಿಸುವ ಮೂಲಕ 'ಉದಯರವಿ' ಯನ್ನು ವಿಶ್ವದರ್ಜೆಯ ಸ್ಮಾರಕವನ್ನಾಗಿ ರೂಪಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ;

(ಈ) ಸಾಹಿತಿ ಆರ್.ಕೆ. ನಾರಾಯಣ್ ಅವರ ಮನೆಯನ್ನು ವಸ್ತುಸಂಗ್ರಹಾಲಯವನ್ನಾಗಿ ಮಾಡಿರುವ ರೀತಿಯಲ್ಲಿಯೇ ಕುವೆಂಪು ಅವರ ಮನೆಯನ್ನೂ ಮ್ಯೂಸಿಯಂ ಆಗಿ ಪರಿವರ್ತಿಸಿದರೆ ಸಾಹಿತ್ಯಾಸಕ್ತರಿಗೆ ಪ್ರೇರಣೆ ಹಾಗೂ ಸಾಹಿತ್ಯದ ಒಂದಿಷ್ಟು ಕೆಲಸಗಳು ಆಗಬಹುದು ಎನ್ನುವ ದೃಷ್ಟಿಯಿಂದ 'ಉದಯ ರವಿ'ಯನ್ನು ಸ್ಮಾರಕವಾಗಿಸುವ ಕುರಿತು ಮುಂದಿನ ಆಯವ್ಯಯದಲ್ಲಿ ಘೋಷಿಸಲು ಸರ್ಕಾರ ಉದ್ದೇಶಿಸಿದೆಯೇ ; ಇದ್ದಲ್ಲಿ, ಮಾಹಿತಿ ಒದಗಿಸುವುದು ?

## ಜಲಜೀವನ್ ಮಿಷನ್ ಯೋಜನೆಯ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೫೫ (೫೫೩) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜಲಜೀವನ್ ಮಿಷನ್ ಹಾಗೂ ಹರ್ ಘರ್ ಜಲ ಯೋಜನೆಯ ಉದ್ದೇಶವೇನು ; ಯೋಜನೆಯನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು ; ಹಾಗೂ ಯಾವ ಕಾಲಮಿತಿಯೊಳಗೆ ಸದರಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಈ ಯೋಜನೆಗಾಗಿ ಪ್ರಾರಂಭದಿಂದ ಈವರೆಗೂ ಕೇಂದ್ರದಿಂದ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಗೊಳಿಸಿರುವ ಅನುದಾನವೆಷ್ಟು ; (ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ಜಲಜೀವನ್ ಮಿಷನ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಲು ಸರ್ಕಾರವು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ; ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಜೆ.ಜೆ.ಎಂ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಉಪಗುತ್ತಿಗೆ ನೀಡಲು ಅವಕಾಶ ಕಲ್ಪಿಸಿರುವುದಿಲ್ಲವಾದರೂ, ಉಪಗುತ್ತಿಗೆ ನೀಡಿರುವುದು ಸರ್ಕಾರದ ಗಮನಕ್ಕಿದೆಯೇ ; ಇದ್ದಲ್ಲಿ, ಉಪಗುತ್ತಿಗೆ ನೀಡಿರುವವರ ವಿರುದ್ಧ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಉ) ಜಲಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಗ್ರಾಮೀಣ ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಕೈಗೊಳ್ಳುವಾಗ ಅಗತ್ಯ ಅಂಶಗಳನ್ನು ಪಾಲಿಸಲು ಹಾಗೂ ಗುಣಮಟ್ಟವನ್ನು ಕಾಯ್ದುಕೊಳ್ಳುವ ಕುರಿತು ಸರ್ಕಾರ ಆದೇಶಿಸಿದ್ದರೂ ಸಹ ಅಗತ್ಯ ಅಂಶಗಳನ್ನು ಪಾಲಿಸದೇ ಮತ್ತು ಕಳಪೆ ಕಾಮಗಾರಿಯನ್ನು ಮಾಡಿರುವವರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಕಲಬುರಗಿಯಲ್ಲಿ 'ಮೆಗಾ ಹಾಸ್ಟೆಲ್' ನಿರ್ಮಾಣದ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೩೬ (೫೧೦) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (KKRDB) ಮೂಲಕ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಲಬುರಗಿ ಜಿಲ್ಲೆಯಲ್ಲಿ ಕೈಗೆತ್ತಿಕೊಂಡಿರುವ ವಿಶೇಷ ಯೋಜನೆಗಳಾವುವು ;

(ಆ) ಕಲಬುರಗಿ ನಗರವು ಶೈಕ್ಷಣಿಕ ಕೇಂದ್ರವಾಗಿರುವುದರಿಂದ, ಇಲ್ಲಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹೊಸ "ಮೆಗಾ ಹಾಸ್ಟೆಲ್" ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ಕಳಪೆ ಕಾಮಗಾರಿ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೭ (೪೬೧) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆ ಹುಮನಾಬಾದ ಮತಕ್ಷೇತ್ರ ಮೋಳಕೇರಾ, ಘಾಟಬೋರಳ, ಹುಣಸಗೇರಾ ಗ್ರಾಮಗಳಲ್ಲಿ ಜೆ.ಜೆ.ಎಮ್. ಕಾಮಗಾರಿಯಲ್ಲಿ ಭ್ರಷ್ಟಾಚಾರ ಮತ್ತು ಕಳಪೆ ಮಟ್ಟದಲ್ಲಿ ಕಾಮಗಾರಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ;

(ಆ) ಕಾಮಗಾರಿ ಕುರಿತು ಸ್ಥಳೀಯ ಗ್ರಾಮಸ್ಥರು ಪ್ರತಿಭಟನೆ ನಡೆಸಿ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದರೂ ಸರ್ಕಾರ ಇಲ್ಲಿಯವರೆಗೆ ಯಾವುದೇ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣವೇನು ;

(ಇ) ಕಾಮಗಾರಿ ಕೈಗೊಂಡ ಗುತ್ತಿಗೆದಾರ ಮತ್ತು ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

## ಕಾರ್ಮಿಕರಿಗೆ ವಿತರಿಸಲು ಖರೀದಿಸಿರುವ ಸೇಫ್ಟಿ ಕಿಟ್‌ಗಳ ಕುರಿತು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೫೮ (೪೮೬) ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರ್ಮಿಕರಿಗೆ ವಿತರಿಸಿದ ಸೇಫ್ಟಿ ಕಿಟ್ ಎಂದರೇನು ; ಈ ಸೇಫ್ಟಿ ಕಿಟ್‌ಗಳಲ್ಲಿ ಯಾವ ಯಾವ ವಸ್ತುಗಳಿವೆ ; ಈ ವಸ್ತುಗಳಿಗೆ ನಿಗದಿಪಡಿಸಿರುವ ದರ ಎಷ್ಟು ; ಈ ಕಿಟ್‌ನಲ್ಲಿ ಯಾವ ಯಾವ ಕಂಪನಿಯ ವಸ್ತುಗಳಿವೆ ; (ವಿವರ ನೀಡುವುದು)

(ಆ) ಕಳೆದ ೩ ವರ್ಷದಿಂದ ಸೇಫ್ಟಿ ಕಿಟ್ ಖರೀದಿಗೆ ಎಷ್ಟು ಬಾರಿ ಟೆಂಡರ್ ಕರೆಯಲಾಗಿದೆ ; ಎಷ್ಟು ಮೊತ್ತದ ಟೆಂಡರ್ ಆಗಿದೆ ; ಎಷ್ಟು ಸೇಫ್ಟಿ

ಕಿಟ್‌ಗಳನ್ನು ಯಾವ ಮೊತ್ತಕ್ಕೆ ಖರೀದಿಸಲಾಗಿದೆ ; (ವರ್ಷವಾರು ವಿವರ ನೀಡುವುದು) ಟೆಂಡರ್ ಯಾವ ಸಂಸ್ಥೆಗೆ ನೀಡಲಾಗಿದೆ ; (ಸಂಸ್ಥೆಯ ವಿಳಾಸ ಮತ್ತು ಸಂಸ್ಥೆ ಜೊತೆ ಮಾಡಿಕೊಂಡಿರುವ ಒಡಂಬಡಿಕೆಯ ಪ್ರತಿ ಒದಗಿಸುವುದು)

(ಇ) ಮೇಲಿನ ಅವಧಿಯಲ್ಲಿ ಖರೀದಿಸಿದ ಸೇಫ್ಟಿ ಕಿಟ್‌ಗಳನ್ನು ಯಾವ ಗೌಡೋನ್‌ಗಳಲ್ಲಿ ಸಂಗ್ರಹಿಸಿಡಲಾಗಿದೆ ; ಗೌಡೋನ್‌ಗಳ ವಿಳಾಸ ನೀಡುವುದು ; ಗೌಡೋನ್‌ಗಳ ಬಾಡಿಗೆ ಎಷ್ಟು ; ಯಾವ ಗೌಡೋನ್‌ನಿಂದ ಎಲ್ಲಿಗೆ ಸರಬರಾಜಾಗಿದೆ ; (ಇನ್‌ವಾಯ್ಸ್ ಪ್ರತಿ ನೀಡುವುದು) ಗೌಡೋನ್‌ನಿಂದ ಸರಬರಾಜು ಮಾಡಿದ ವಾಹನಗಳ ಸಂಖ್ಯೆ ನೀಡುವುದು ;

(ಈ) ಕಳೆದ ೩ ವರ್ಷದಿಂದ ಎಷ್ಟು ಸೇಫ್ಟಿ ಕಿಟ್‌ಗಳ ವಿತರಣೆ ಆಗಿದೆ ; ಕಾರ್ಮಿಕರಿಗೆ ಕಿಟ್‌ಗಳು ಯಾವ ರೀತಿ ವಿತರಣೆ ಆಗಿದೆ ; ವಿತರಣೆ ಮಾಡಿದ ನಂತರ ಕಾರ್ಮಿಕರಿಂದ ಅವರ ಆಧಾರ್ ಕಾರ್ಡ್, ಕಾರ್ಮಿಕ ಕಾರ್ಡ್ ಅಥವಾ ಇತರೆ ಯಾವ ದಾಖಲೆಯನ್ನು ಪಡೆಯಲಾಗಿದೆ ; (ಸಮಗ್ರ ವಿವರವನ್ನು ವರ್ಷವಾರು ನೀಡುವುದು)

(ಉ) ಕಳೆದ ವರ್ಷ ಖರೀದಿಸಿದ್ದ ಕಿಟ್‌ಗಳ ಪೂರ್ಣ ಪ್ರಮಾಣದಲ್ಲಿ ವಿತರಣೆ ಆಗಿದೆಯೇ ; ಎಷ್ಟು ಬಾಕಿ ಉಳಿದಿದೆ ; ಕಿಟ್‌ಗಳ ಬಾಕಿ ಉಳಿದಿದ್ದರೂ ಮತ್ತು ಖರೀದಿಸುವ ಅವಶ್ಯಕತೆ ಏನು ;

(ಊ) ಕಿಟ್‌ಗಳ ಖರೀದಿಗೆ ಮತ್ತೆ ಟೆಂಡರ್ ಕರೆಯಲಾಗಿದೆಯೇ ; ಟೆಂಡರ್ ಕರೆದಿದ್ದು ಯಾವಾಗ ?

## ರಾಜ್ಯದ ರೈತರಿಗೆ ರಾಸಾಯನಿಕ ಗೊಬ್ಬರ ನೀಡುವ ಕುರಿತು

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) –**

೫೯ (೪೭೯) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ರೈತರು ವ್ಯವಸಾಯ ಮಾಡಲು ಅನುಕೂಲಕ್ಕೆ ತಕ್ಕಂತೆ ಕೃಷಿ ಇಲಾಖೆಯಿಂದ ರೈತರಿಗೆ ರಾಸಾಯನಿಕ ಗೊಬ್ಬರವನ್ನು ಸರಿಯಾಗಿ ವಿತರಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ರೈತರಿಗೆ ರಾಸಾಯನಿಕ ಗೊಬ್ಬರದ ಕೊರತೆ ಇದೆ ; ಈ ತೊಂದರೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ? (ತಾಲ್ಲೂಕುವಾರು ಪೂರ್ಣವಾದ ಮಾಹಿತಿಯನ್ನು ನೀಡುವುದು)

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿನ ನಿಗಮಗಳ ಬಗ್ಗೆ

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) –**

೬೦ (೪೩೮) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಡಿಯಲ್ಲಿ ಎಷ್ಟು ಅಭಿವೃದ್ಧಿ ನಿಗಮಗಳು ಕಾರ್ಯನಿರ್ವಹಿಸುತ್ತಿವೆ ; ಮತ್ತು ಹೊಸದಾಗಿ ಯಾವುದಾದರೂ ಸಮುದಾಯಗಳಿಗೆ ಪ್ರತ್ಯೇಕ ನಿಗಮಗಳನ್ನು ಸ್ಥಾಪಿಸುವ ಬೇಡಿಕೆ ಅಥವಾ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಯಾವಾಗ ಸ್ಥಾಪನೆಯಾಯಿತು ಮತ್ತು ಪ್ರಸ್ತುತ ನಿಗಮದ ವ್ಯಾಪ್ತಿಗೆ ಒಳಪಡುವ ಹಿಂದುಳಿದ ಜಾತಿಗಳು ಯಾವುವು ;

(ಇ) ಸದರಿ ನಿಗಮವು ಸ್ಥಾಪನೆಯಾದಾಗಿನಿಂದ ವಿವಿಧ ಜಾತಿವಾರು ನಿಗಮಗಳು ಪ್ರತ್ಯೇಕಗೊಳ್ಳುವವರೆಗೂ ಯಾವ ಜಾತಿಗಳ ಅಭಿವೃದ್ಧಿಗೆ ಎಷ್ಟು ಅನುದಾನ ಬಳಸಲಾಗಿತ್ತು ; ಮತ್ತು ಹೊಸ ನಿಗಮಗಳು ರಚನೆಯಾದ ನಂತರ ಆಯಾ ಜಾತಿಗಳಿಗೆ ಹಂಚಿಕೆಯಾದ ಅನುದಾನದ ಮೊತ್ತವೆಷ್ಟು ;

(ಈ) ಇಲಾಖೆಯ ವ್ಯಾಪ್ತಿಯ ವಿವಿಧ ನಿಗಮಗಳಿಗೆ ಸರ್ಕಾರವು ಈವರೆಗೆ ಬಿಡುಗಡೆ ಮಾಡಿರುವ ಒಟ್ಟು ಅನುದಾನ ಎಷ್ಟು ; ಮತ್ತು ಆ ಪೈಕಿ ನಿಗಮಗಳು ತಮ್ಮ ಆಡಳಿತಾತ್ಮಕ ವೆಚ್ಚಗಳಿಗೆ ಹಾಗೂ ಕ್ರಿಯಾ ಯೋಜನೆಗಳ ಅನುಷ್ಠಾನಕ್ಕೆ ಪ್ರತ್ಯೇಕವಾಗಿ ಖರ್ಚು ಮಾಡಿರುವ ಮೊತ್ತವೆಷ್ಟು ;

(ಉ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ನಿಗಮಗಳು ಈವರೆಗೆ ಫಲಾನುಭವಿಗಳಿಗೆ ವಿಸ್ತರಿಸಿರುವ ಒಟ್ಟು ಸಾಲದ ಮೊತ್ತವೆಷ್ಟು ; ಮತ್ತು ಅದರಲ್ಲಿ ಈವರೆಗೆ ಮರುಪಾವತಿ ಆಗಿರುವ ಮೊತ್ತವೆಷ್ಟು ;

(ಊ) ಸಾಲ ಮರುಪಾವತಿಯನ್ನು ಚುರುಕುಗೊಳಿಸಲು ನಿಗಮಗಳು ಸದ್ಯ ಅನುಸರಿಸುತ್ತಿರುವ ವಿಧಾನಗಳೇನು ; ಸಾಲ ವಸೂಲಾತಿಯನ್ನು ಸರಳಿಗೊಳಿಸಲು ECS (Electronic Clearing Service) ಅಥವಾ Auto Debit ನಂತಹ ಆಧುನಿಕ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಉದ್ದೇಶ ಸರ್ಕಾರದ ಮುಂದಿದೆಯೇ ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಕಾ.ಸೂ.667/ಪಿ5

**List of Questions for Oral Answers**

**Total No. of Questions - 15**

# LIST - 4

# KARNATAKA LEGISLATIVE COUNCIL

## ONE HUNDRED AND FIFTY EIGHTH SESSION

## Friday, the 30th January, 2026

---

**GROUP - V**

1. Minister for Social Welfare
2. Minister for Rural Development and Panchayat Raj and Information Technology and Bio-Technology
3. Minister for Agriculture
4. Minister for Labour
5. Minister for Backward Classes Welfare and Kannada and Culture
6. Minister for Planning and Statistics
7. Minister for Women and Child Development and Empowerment of Differently Abled and Senior Citizens

---

**COMPLETE RUINING OF RURAL ROADS IN KOLAR DISTRICT**

**Sri Govinda Raju (Elected by Legislative Assembly) -**

46 (428) Will the Minister for Rural Development and Panchayat Raj and Information Technology and Bio-Technology be pleased to state:-

(a) whether it has come to the notice of the Government that the rural roads have been ruined completely due to the heavy rain in the limits of all 6 Assembly Constituencies of Kolar District ; if so, the steps taken by the Government to repair the same ; (complete information be furnished)

(b) the grant that has been provided to Kolar District for the development of rural road and infrastructure development excluding MGNREGA Scheme during the year 2024-25 and 2025-26 ; (schemewise information be furnished)

(c) the reasons for the grant not being provided for the repair of rural roads in Kolar District so far; the timelimit within which the step would be taken by the Government to release the grant?

## JAYANTIS/BIRTHDAY CELEBRATIONS BY THE STATE GOVERNMENT

**Dr.Dhananjaya Sarji (Graduates' Constituency) -**

47 (552) Will the Minister for Backward Classes Welfare and Kannada and Culture be pleased to state:-

(a) the particulars of jayantis/birthday celebrations which are being celebrated by the State Government ; the total amount that is being spent every year ; (the information of the last 3 years be furnished)

(b) the total grant that has been spent for organizing the programme in the State level with regard to the celebration of various jayantis/birthdays during the last 3 years ; the average number of programmes that have been organized ;

(c) whether it has come to the notice of the Government that the purpose of celebrating these jayantis have not been fulfilled despite a lot of money has been spent and put immense efforts for the programme where limited people will participate in the State/district level ;

(d) the stand of the Government with regard to celebration of the jayantis in different way by participation of the students and also, communicating the importance of

jayantis for the students by organizing the same in school-colleges across the State instead of the jayantis will organize limited people by spent a lot of grant ;

(e) whether the Government has aware that the importance of jayantis have been published widely in the school-colleges along with personality development with the participation of the students in this manner; the step to be taken by the Government in this regard ?

## HOSTELS TO CASTES OF CATEGORY-I

**Sri D.T. Srinivas (D.T.S) (Teachers' Constituency) -**

48(504) Will the Minister for Backward Classes Welfare and Kannada and Culture be pleased to state:-

(a) the number of prevailing hostels and residential schools for the educational development of backward nomadic and semi nomadic communities in the State ; (districtwise information be furnished)

(b) the number of backward nomadic and semi nomadic students who are studying in the hostels and residential schools ; (separate information of boys/girls be furnished)

(c) whether the admission has been provided in the hostels and residential schools for the students of all backward nomadic and semi nomadic communities so that they are not deprived from the education ;

(d) if not, the number of students for whom the admission has not been provided ; (districtwise information be furnished)

(e) the particulars of policies of the Government for providing educational facilities to the backward nomadic communities on par with nomadic communities of

Scheduled Caste and Scheduled Tribes ? (details be furnished)

**REGARDING MGNREGA SCHEME**

**Sri Kishor Kumar Puttur (Local Authorities Constituency) -**

49 (517) Will the Minister for Rural Development and Panchayat Raj and Information Technology and Bio-Technology be pleased to state:-

(a) the number of objection and recovery cases that have been lodged in the social audit in the Gram Panchayats after commencement of MGNREGA Scheme till date ; (districtwise information be furnished)

(b) the total amount of the objection and recovery cases as per the said audit report; the step that has been taken for lodged recovery recorded in the said report ; (districtwise information be furnished)

(c) the number of corruption cases that have been traced out by the district ombudsman in the works after commencement of the said scheme; the amount thereof ; the number of people representatives and the officers who have been recommended for the disciplinary action ; (districtwise information the be furnished)

(d) the penalty that has been imposed for the works taken up against the said Act after commencement of the scheme; the amount that has been recovered ;

(e) the number of cases that have been lodged in the Lokayukta and ACB with regard to the works taken up under the said scheme after commencement of the scheme ; the amount of the said works; and the amount of the works that have been recovered as per the order of the Lokayukta ;

(f) the number of officers and the staff of the department who have faced the departmental enquiry in the phase manner for the reasons of lacunas in the said scheme after commencement of the scheme ; and the number of officers and staff who have been suspended; and the amount that has recovered by them ; the number of representatives on which the case has been lodged for the misuse of the said scheme ; (districtwise information be furnished)

(g) the reasons entrusting all the works that have been carriedout in the State after 2010 to the Lokayukta by the Government for the investigation ?

**REGARDING UTILIZATION OF THE AMOUNT OF SCSP/TSP SCHEME TO GUARANTEES**

**Smt. Hemalatha Nayak (Elected by Legislative Assembly) -**

50 (522) Will the Minister for Social Welfare be pleased to state:-

(a) the grant that has been earmarked under the SCSP/TSP Scheme for the welfare of scheduled Caste and Scheduled Tribes for the year 2023-24 and 2024-25 and till the end of the December 2025-26 and the grant that has been released ;

(b) out of this grant, the amount that has been transferred by earmarking by the State Government for the implementation of Guarantee Schemes; out of the transferred grant, the amount that has been utilized ; (yearwise complete information be furnished)

(c) the amount that has been spent for the beneficiaries of Scheduled Caste and Scheduled Tribes under the guarantee Schemes in the above year ; the number of Scheduled Caste and Scheduled Tribes beneficiaries coming under each Guarantee Schemes ; (each Guarantee Schemewise information be furnished)

(d) if the earmarked amount for the welfare of Scheduled categories has been transferred to the Guarantee Scheme, if the same has been utilized and if they were not the beneficiaries, whether it will caused misuse of the amount of SCSP/TSP Scheme ; whether there is a violation of the SCSP/TSP ACT ; whether it would be cause setback for the welfare of dalits ;

(e) whether the step would be taken by the Government to utilize the amount that has been utilized for the implementation of this Guarantee Schemes again in the SCSP/TSP Scheme ;

(f) the number of corporations which are coming under the Social Welfare Department; the particulars of schemes which are being implemented in the corporations ; the grant that has been declared and released for the Corporations during the year 2021-22, 2022-23, 2023-24, 2024-25 and 2025-2026; the amount that has been released according to the schemes which are available for the public in the Corporation and the number of beneficiaries thereof; whether the scheme has reached to all the beneficiaries who have been selected under the various schemes ? (financial yearwise separate complete information be furnished)

**REGARDING SUICIDE OF FARMERS**

**Sri Nirani Hanamant Rudrappa (Graduates' Constituency) -**

51(471) Will the Minister for Agriculture be pleased to state:-

(a) the particulars of schemes that have been chalkedout for the welfare of farmers of the State during the last three years ; (separate information be furnished)

(b) whether the farmer welfare schemes that have been chalked out by the Government during the year 2022-23 have been continued as per scheduled; or

whether any schemes have been dropped out; if so, the complete information along with description and records be furnished;

(c) whether the cases of suicide of farmer have been reported from May 2023 to December 2025 ; the total number of farmers who have committed suicide; the reasons for the suicide; whether the compensation has been paid to the farmers who have lost their life ; (yearwise and districtwise complete information be furnished)

(d) the complete information of the grant that has been earmarked, sanctioned and utilized for the welfare of farmers during the current financial year be furnished ; if not, the steps taken by the Government ;

(e) the crops of the farmers were damaged during the drought, the steps taken by the Government to strengthen them financially and compensate for the loss caused by the drought ?

## HOSTELS IN THE STATE

**Sri K.S. Naveen (Local Authorities Constituency) -**

52 (436) Will the Minister for Social Welfare be pleased to state:-

(a) the total number of hostels in the State ; (districtwise details be furnished)

(b) the number of applications that have been received for the hostels every year ;

(c) the number of students to whom the admission has been provided during the last 2 years ;

(d) the manner in which the selection process of students for the said hostels will be carriedout ;

(e) the amount which is being spent by the Government per year for each student ?

## NON PROGRESS OF GANGA KALYANA SCHEME IN THE STATE

**Sri Jagadev Guttedar (Elected by Legislative Assembly) -**

53 (551) Will the Minister for Social Welfare be pleased to state:-

(a) whether it has come to the notice of the Government that the number of beneficiaries under Ganga Kalyana Scheme have been reduced significantly in the State ;

(b) if so, the reasons for the same; the number of beneficiaries who have submitted application in Kalaburagi district during the last 3 years and out of which, the number of beneficiaries who have been selected ;

(c) the steps taken by the Government to increase the progress of Ganga Kalyana Scheme?

## CONVERTING OF "UDAYARAVI" RESIDENCE INTO A MUSEUM

**Sri Prathap Simha Nayak K. (Elected by Legislative Assembly) -**

**Sri Madhu G. Madegowda (Graduates' Constituency) -**

54 (446+526) Will the Minister for Backward Classes Welfare and Kannada and Culture be pleased to state:-

(a) the "Udayaravi" residence of the Rashtrakavi Sri Kuvempu in Mysuru is the iconic spectator to the birth of the poet's literary masterpiece "Sriramayanadarshanam" and his "Vishwa Manava Sandesha" to the world and it is the long standing dream and demand of every Kannadiga to convert this sanctium into a museum ; whether the proposal is before the Government in this regard ;

(b) if so, the reasons for any necessary measure has not been taken by the Government till date for converting

such notable place into the museum on par with world class or classic model ;

(c) it is the fundamental duty of any Government to protect the legacy of personalities who have defined the culture of the State, the measure that would be taken by the Government to convert " Udayaravi" residence into the world class memorial by providing required financial assistance, expert management and the administrative framework for the project without any delay by the Government ;

(d) if the residence of Kuvempu has been converted into the museum in the same manner the residence of literator R.K. Narayanan was converted into the museum, whether there is an intention of the Government to declare the "Udayaravi" residence into the memorial in the coming budget in view of inducement of people who are interested in literature and some work of literature would be carried out ; if so, the information be furnished ?

## REGARDING JAL JEEVAN MISSION SCHEME

**S.L. Bhojegowda (Teachers' Constituency) -**

55 (553) Will the Minister for Rural Development and Panchayat Raj and Information Technology and Bio-Technology be pleased to state:-

(a) the purpose of Jal Jeevan Mission and Har Ghar Jal Scheme ; the year in which the scheme has been commenced ; and the timelimit within which the said scheme would be completed ; ( complete information be furnished)

(b) the grant that has been released by the Central and State Government from the commencement of this scheme till date ; (yearwise complete information be furnished)

(c) the particulars of problems that are being faced by the Government to implement the Jal Jeevan Mission Scheme in the State ; the measure taken by the Government to resolve this problem ;

(d) whether the Government is aware that the subcontract has been given eventhough the provision has not been provided to subcontract of the works which have been taken up under Jal Jeevan Mission ; if so, the step that has been taken up by the Government against these persons who have given subcontract ; (complete information be furnished)

(e) the particular of action that has been taken against the persons who have executed substandard work without complying the necessary facts eventhough the order has been issued by the Government to comply with the necessary facts and maintaining standards while taking up the work to provide functional household tap connections for the rural houses of the State under the Jal Jeevan Mission ? (complete information be furnished)

## CONSTRUCTION OF 'MEGA HOSTEL' IN KALABURAGI

**Sri Thippanappa Kamaknoor (Elected by Legislative Assembly) -**

56 (510) Will the Minister for Social Welfare be pleased to state:-

(a) the particulars of special projects that have been taken up by the Social Welfare Department in Kalaburagi district through the Kalyana Karnataka Region Development Board (KKRDB) ;

(b) since the Kalaburagi city is a educational centre, whether the proposal is before Government for the construction of new 'Mega Hostel' according to the number of students who are coming therein ?

## REGARDING SUBSTANDARD WORK

**Sri Bhimrao Basavaraj Patil (Local Authorities Constituency) -**

57 (461) Will the Minister for Rural Development and Panchayat Raj and Information Technology and Bio-Technology be pleased to state:-

(a) whether it has come to the notice of the Government that the corruption and substandard works are being carriedout in the work under Jal Jeevan Mission (JJM) in Molakera, Ghataborala and Hunasagera villages of Humnabad constituency of Bidar district ; if so, the step taken by the Government in this regard ;

(b) the reason for the action has not been taken by the Government against any concerned officers till date eventhough conducting protest by the local people with regard to the works are being telecasted in medias ;

(c) the actions that would be taken by the Government against the contractors and officers who have carried out the work ?

## REGARDING SAFETY KITS PURCHASED FOR DISTRIBUTION TO LABOURS

**Sri C.T. Ravi (Elected by Legislative Assembly) -**

58 (486) Will the Minister for Labour be pleased to state:-

(a) the definition of safety kit which have been distributed for workers ; the particulars of items in these safety kits; the price that has been fixed for these items ; the particulars of companies items that are there in these kit ; (details be furnished)

(b) the number of times in which the tender has been invited for the purchase of safety kits during the last 3 years; the amount of the tender for the same;

the details of the amount and the number of safety kits that have been purchased ; (yearwise details be furnished) the agency for which the tender has been awarded ; (the address of the agency and copy of the agreement be furnished)

(c) the particulars of godowns in which the safety kits have been stored that have been purchased during the above period ; the address of the godowns be furnished ; the rent of the godowns ; the places where the items has been supplied from various godowns ; (the copy of invoice be furnished) the the number of vehicles which have supplied the same from the godown be furnished ;

(d) the number of safety kits that have been distributed during the last 3 years; the manner in which the kits have been distributed to the workers; the particulars of documents like Aadhar Card, Labour Card or any other documents of the workers that have been obtained after distribution ; (yearwise comprehensive details be furnished)

(e) whether the kits have been distributed completely that have been purchased last year; the number of kits remaining; the necessity for the purchase of the same eventhough the kits are remaining;

(f) whether the tender has been invited again for the purchasing of the kits; the date on which the tender has been invited?

## PROVIDING CHEMICAL FERTILIZER TO FARMERS OF THE STATE

**Sri K. Vivekananda (Teachers' Constituency) -**

59 (479) Will the Minister for Agriculture be pleased to state:-

(a) whether it has come to the notice of the Government that the Agriculture Department is not distributing

chemical fertilizers properly to farmers in the State as per their requirement for farming ;

(b) if so, the places of the State in which there is a shortage of chemical fertilizer to the farmers; the steps taken by the Government to resolve this problem ? (talukwise complete information be furnished)

**CORPORATIONS IN**
**BACKWARD CLASSES WELFARE DEPARTMENT**

**Sri Shivakumar K. (Nominated) -**

60 (438) Will the Minister for Backward Classes Welfare and Kannada and Culture be pleased to state:-

(a) the number of Development Corporations which are functioning under the Backward Classes Welfare Department currently ; and whether the demand or proposal is before the Government to establish the new separate Corporations to any communities ;

(b) the date on which D. Devaraj Urs Backward Classes Development Corporation has been established and the particulars of backward castes which are coming in the limit of the corporation currently ;

(c) the grant that has been utilized for the development of various castes from the establishment of the said Corporation till the bifurcation of various castewise Corporations ; and the grant that has been allotted to respective castes after new corporations has been constituted ;

(d) the total grant that has been released by the Government to various Corporations under the preview of department so far ; and out of which, the amount that has been spent by the Corporations to their administrative expenses and implementation of action plans separately ;

(e) the total amount of loan that has been extended to beneficiaries by the various Corporations of Backward Classes Welfare Department so far ; and out of which, the amount of repayment so far ;

(f) the methods which are being followed by the Corporations to speed up the loan repayment currently ; whether the intension is before the Government to adopt the modern technology based system like ECS (Electronic Clearing Service) or auto debit to simplify the loan recovery?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, WD - 667 - P2